ಶ್ರೀ ಪಿ. ವೆಂಕಟಗಿರಿಯಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ ಕೋಲಾರ ವಿಭಾಗದಲ್ಲಿ 31.50 ಲಕ್ಷ ಕಿಲೋಗ್ರಾಮ್ಸ್ ನೂಲು ತೆಗೆಯುವ ರೇಷ್ಮೆ ಗೂಡುಗಳು 62—63 ನೆಯ ಸಾಲಿನಲ್ಲಿ ಉತ್ಪತ್ತಿ ಯಾಗಬಹುದೆಂದು ಅಂದಾಜಿದೆ ಎಂದು ಹೇಳಿದ್ದೀರಿ. ಕೋಲಾರದ್ದು ಉತ್ತಮ ಕ್ವಾಲಿಟಿ ಗೂಡು ಎಂದು ನಿರ್ಧರಿಸಿದ್ದಾರಲ್ಲವೇ ?

†ಶ್ರೀ ಆರ್. ದಯಾನಂದ ಸಾಗರ್.— ಹೌದು.

ಶ್ರೀ ಪಿ. ವೆಂಕಟಗಿರಿಯಪ್ಪ.—ಮೈಸೂರು ವಿಭಾಗದಲ್ಲಿ ಕೇವಲ 21.75 ಲಕ್ಷ ಕಿಲೋಗ್ರಾಂ ಗೂಡುಗಳು ಬೆಳೆಯುತ್ತಿದ್ದರೂ ಅಲ್ಲಿ 2 ಫಿಲೇಚರ್ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲಾಗಿದೆ. ಕೋಲಾರದಲ್ಲಿ 31 ಲಕ್ಷ ಕಿಲೋಗ್ರಾಂ ಗೂಡನ್ನು ಬೆಳೆಯುವಾಗ ಅಲ್ಲಿ ಒಂದು ಕಾರ್ಖಾನೆಯನ್ನೂ ಸ್ಥಾಪನೆಮಾಡಿಲ್ಲದಿರುವುದಕ್ಕೆ ಕಾರಣವೇನು ?

ಶ್ರೀ ಆರ್. ದಯಾನಂದ ಸಾಗರ್.—ಕೋಲಾರದಲ್ಲಿ ಎರಡು ಪ್ರೈವೇಟ್ ಫಿಲೇಚರ್ ಕಾರ್ಖಾನೆಗಳಿವೆ, ಒಂದರಲ್ಲಿ ಲಾಭ ಬಂದಿಲ್ಲವೆಂದು ಅದನ್ನು ಮುಚ್ಚಿದ್ದಾರೆ. ಇನ್ನೊಂದು ನಡೆಯುತ್ತಿದೆ.

Sri G. V. GOWDA.—Are the Government aware that there are atleast 50 private filatures running in Kollegal ?

Sri R. DAYANANDA SAGAR.—Not to our knowledge.

Sri G. V. GOWDA.—Is it not a fact that 100 basins were supplied to 10 filatures ?

Sri R. DAYANANDA SAGAR.—It is domestic basins. I have no knowledge of supplying these to filatures as such.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕುಣಿಗಲ್ ವಿಭಾಗದಲ್ಲಿ 7.20 ಲಕ್ಷ ಕಿಲೋಗ್ರಾಂ ಗೂಡು ಉತ್ಪತ್ತಿಯಾಗುವುದೆಂದು ಹೇಳಿದ್ದೀರಿ. ಅದನ್ನು ಬತ್ತನೆಗೆ ಕೊಡುವುದರಿಂದ ವರ್ಷೇವರ್ಷೇ ಗೂಡುಗಳ ಸಂಖ್ಯೆ ಹೆಚ್ಚುತ್ತಿದೆಯೇ ಅಥವಾ ಕಡಮೆಯಾಗುತ್ತಿದೆಯೇ ?

ಶ್ರೀ ಆರ್. ದಯಾನಂದ ಸಾಗರ್.—ಅದು ರೀಲಿಂಗ್ ಕಕೂನ್. ಅದ್ದರಿಂದ ಬತ್ತನೆಗೆ ಅನುಕೂಲವಾಗುವುದಿಲ್ಲ, ಸ್ವಲ್ಪ ಹೆಚ್ಚುಕಡಿಮೆಯಾಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಮೂರು ಸರ್ಕಾರಿ ರೇಷ್ಮೆ ಫಿಲೇಚರ್ ಕಾರ್ಖಾನೆ ಗಳಲ್ಲೂ 1960—61, 61—62 ಮತ್ತು 62—63 ನೆಯ ಸಾಲುಗಳಲ್ಲಿ 6 ಲಕ್ಷ, 9 ಲಕ್ಷ ರೂಪಾಯಿ—ಹೀಗೆ ಪ್ರತಿ ಸಾಲಿನಲ್ಲೂ ನಷ್ಟವಾಗುವುದಕ್ಕೆ ಕಾರಣವೇನು ? ನಷ್ಟವಾಗದ ಹಾಗೆ ಏರ್ಪಾಡು ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಆರ್. ದಯಾನಂದ ಸಾಗರ್.—ಅದನ್ನು ಈಗಾಗಲೆ ಹೇಳಿದೆ. ನಷ್ಟವಾಗುವುದಕ್ಕೆ ಎರಡು ಮುಖ್ಯ ಕಾರಣಗಳಿವೆ. ಒಂದು ನಾವು ಬೆಳೆಯುವ ಗೂಡುಗಳು ಉತ್ತಮ ದರ್ಜೆಯವಲ್ಲ ಮತ್ತು ಈ ಗೂಡುಗಳಿಂದ ಸೇಕಡ 75 ರಷ್ಟು ಮಾತ್ರ ರೇಷ್ಮೆ ದೊರೆಯುವುದು. ಈ ಕಾರಣದಿಂದ ಉತ್ಪತ್ತಿಯ ಖರ್ಚು ಹೆಚಾಗುತ್ತದೆ. ಎರಡನೆದಾಗಿ ಫಿಲೇಚರ್‌ನಲ್ಲಿರುವ ಮೆಷೀನ್ ಹೇಳೇ ಕಾಲದ್ದು, ಅದನ್ನು ಮಾಡರನೈಜ್ ಮಾಡಿಲ್ಲ. ಈ ಎರಡೂ ಕಾರಣಗಳಿಂದ ನಷ್ಟವಾಗುತ್ತಿದೆ.

Appointment of Arbitrators to the Co-operative Institutions in Dharwar District.

*Q.—563. Sri SIDDIAH KASIMATH (Shirahatti).—

Will the Government be pleased to state :—

(*a*) the number of persons who have been appointed as Arbitrators to the Co-operative Institution in Dharwar District for the year 1963-64 ;

(*b*) the number of cases that have been finalised by the said Arbitrators during 1963-64 ;

(*c*) the number of Arbitration cases that have been sent to the Assistant Registrar by the Co-operative Societes in the District during the said year ?

A.—**Sri KONDAJJI BASAPPA** (Deputy Minister for Co-operation)—

(*a*) 41.

(*b*) 1,127 up to 29-2-1964.

(c) 2,273 up to 29-2-1964.

ಶ್ರೀ ಸಿದ್ದಯ್ಯ ಕಾಶೀಮಠ.—ಮಧ್ಯಸ್ಥ ನಿರ್ಣಯದಾರರುಗಳನ್ನು ನೇಮಕ ಮಾಡುವುದಕ್ಕೆ ಮುಖ್ಯವಾಗಿರಬೇಕಾದ ಅಹರ್ತೆಗಳೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ಜನಸಾಮಾನ್ಯರಲ್ಲಿ ಸಂಪರ್ಕವಿಟ್ಟುಕೊಂಡು ಚೆನ್ನಾಗಿ ಅವರಲ್ಲಿ ಮಿಳಿತವಾಗಿರಬೇಕು ಮತ್ತು ಸಹಕಾರದ ವಿಚಾರದಲ್ಲಿ ಒಳ್ಳೆಯ ಅನುಭವ ಪಡೆದಿರಬೇಕು.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಮಧ್ಯಸ್ಥ ನಿರ್ಣಯದಾರರು ಸಾಮಾನ್ಯವಾಗಿ ಇಷ್ಟು ಕೇಸುಗಳನ್ನು ತೀರ್ಮಾನಮಾಡಬೇಕೆಂದೇನಾದರೂ ಕಂಡೀಷನ್ ಹಾಕಿದ್ದೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಸಾಮಾನ್ಯವಾಗಿ ಅವರಿಗೆ ಒಪ್ಪಿಸಿರುವುದನ್ನು ಆಯಾವರ್ಷವೇ ಡಿಸ್‌ಪೋಸ್ ಮಾಡಬೇಕು, ಹಾಗೆ ಮಾಡದಿದ್ದರೆ ಮುಂದಿನ ವರ್ಷ ಅವರನ್ನು ನೇಮಿಸುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಉತ್ತರದಲ್ಲಿ 29-2-64 ರವರೆಗೆ 2,273 ಪ್ರಕರಣಗಳನ್ನು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ಕಳುಹಿಸಿಕೊಟ್ಟಿದೆ, ಮತ್ತು 1,127 ಪ್ರಕರಣಗಳನ್ನು ಅಂತಿಮ ಗೊಳಿಸಲಾಗಿದೆ ಎಂದು ಹೇಳಿದೆ. ಉಳಿದಿರುವುದು ಯಾವುದು ಎಂದು ಕಂಡುಹಿಡಿದು ಜಾಗ್ರತೆ ತೀರ್ಮಾನಮಾಡುತ್ತೀರಾ ? ವಹಿಸಿದ್ದ ಕೇಸುಗಳನ್ನು ಈಗಿರುವವರು ಡಿಸ್‌ಪೋಸ್ ಮಾಡದಿದ್ದರೆ ಅವರನ್ನು ಅಂದರೆ ತಪ್ಪಿತಸ್ಥರನ್ನು ತೆಗೆಯಲು ಪ್ರಯತ್ನಿಸುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಉತ್ತರದಲ್ಲಿ 29-2-64ರವರೆಗೆ ಮಾತ್ರ ಇರುವ ಅಂಕಿ ಕೊಟ್ಟಿದೆ. ಇತ್ತೀಚೆಗೆ ಮೇ 10ರವರೆಗೆ ಕೆಲವನ್ನು ಡಿಸ್‌ಪೋಸ್ ಮಾಡಲಾಗಿದೆ. ಮೇ 64ರವರೆಗೆ ಆರ್ಬಿಟ್ರೇಷನ್ ಕೇಸನ್ 4,157 ಧಾರವಾಡ ಮತ್ತು ಹಾವೇರಿ ಅಸಿಸ್ಟೆಂಟ್ ರಿಜಿಸ್ಟ್ರಾರರ ಆಫೀಸಿನಲ್ಲಿ ರಿಜಿಸ್ಟರಾಗಿವೆ, ಹಿಂದಿನವು 54 ಕೇಸುಗಳು ಪೆಂಡಿಂಗ್ ಇದ್ದುವು. ಒಟ್ಟು ಎಲ್ಲಾ ಸೇರಿ 4,211 ಕೇಸುಗಳಲ್ಲಿ 2,025 ಡಿಸ್‌ಪೋಸ್ ಆಗಿವೆ ; 2,086 ಪೆಂಡಿಂಗ್ ಇವೆ.

Sri C. J. MUCKANNAPPA.—In view of the recent Government order that no prosecution should be launched against people who misappropriate, do Government yet consider the appointment of arbitrators ?

Sri KONDAJJI BASAPPA.—It has nothing to do with that.

Sri C. J. MUCKANNAPPA.—Arbitration arise only when there is a dispute ?

Sri KONDAJJI BASAPPA.—No, no.

SHORT NOTICE QUESTION AND ANSWER.

Refusal of admission to Students from Kasargod Kannada area in Mangalore and Mercara Colleges.

Q.—30. **Sri SANJEEVANATH AIKALA** (Suratkal).—

Will the Government be pleased to state :—

(*a*) whether it is a fact that a large number of students from Kasargod Kannada area are refused admission to Colleges by College authorities of Mangalore and Mercara affiliated to Mysore University ;

(*b*) the number of students who sought admission to Colleges mentioned above ;